



# ಸುದ್ದಿ-ಸಂಚಾರಿ

ಇದು ನಮ್ಮೂರ ಸುದ್ದಿ ವಾಹಿನಿ


**ಆನವಟ್ಟಿ**
ಏ.28 ಪಕ್ಷೇತರ ಅಭ್ಯರ್ಥಿ ಈಶ್ವರಪ್ಪ ಸಭೆ


ಶನಿವಾರ,27ನೇ ಏಪ್ರಿಲ್,2024 | ● ಸಂಪುಟ-1 | ● ಸಂಚಿಕೆ-66 | ● ಉಚಿತ | ● | ● www.suddisanchaari.in




**ಸೊರಬ: ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಹರತಾಳು ಹಾಲಪ್ಪ ಆರೋಪ**

# ಗೀತಾಗೆ ಪಕ್ಷದ ಮುಖಂಡರ ಹೆಸರೇ ಗೊತ್ತಿಲ್ಲ'

ಸುದ್ದಿ ಸಂಚಾರಿ

ಸೊರಬ: 'ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜಕುಮಾರ್ ಅವರು ತಂದೆ ಬಂಗಾರಪ್ಪ ಹಾಗೂ ಮಾವ ಡಾ.ರಾಜಕುಮಾರ್ ಹೆಸರಿನಲ್ಲಿ ಮತ ಕೇಳುವುದನ್ನು ಬಿಟ್ಟರೆ, ಅವರಿಗೆ ಕ್ಷೇತ್ರದ ಬಗ್ಗೆ ಯಾವ ಅರಿವೂ ಇಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಹರತಾಳು ಹಾಲಪ್ಪ ಆರೋಪಿಸಿದರು.

ಶುಕ್ರವಾರ ಬಿಜೆಪಿ ಯುವ ಮೋರ್ಚಾ ವತಿಯಿಂದ ಅಭ್ಯರ್ಥಿ ಬಿ.ವೈ.ರಾಘವೇಂದ್ರ ಪರವಾಗಿ ಪಟ್ಟಣದಲ್ಲಿ ಬೈಕ್ ರ‍್ಯಾಲಿ ಮೂಲಕ ಮತ ಯಾಚಿಸಿ ಮಾತನಾಡಿದರು.

'ಗೀತಾ ಶಿವರಾಜಕುಮಾರ್ ಅವರಿಗೆ ತಮ್ಮ ಪಕ್ಷದ ಮುಖಂಡರ ಹೆಸರೇ ಗೊತ್ತಿಲ್ಲ. ಸರಿಯಾಗಿ ಕಾರ್ಯಕರ್ತರ ಪರಿಚಯವಿಲ್ಲ. ಹೀಗಿರುವಾಗ ಮಲೆನಾಡು ಹಾಗೂ ಶರಾವತಿ ಸಂತ್ರಸ್ತರ ಸಮಸ್ಯೆ ಇತ್ಯರ್ಥಪಡಿಸಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ದೊಡ್ಡವರ ಹಾಗೂ ಜಾತಿ ಹೆಸರಿನಲ್ಲಿ ಮತ ಕೇಳುವ ವ್ಯಕ್ತಿಗೆ ಮತ ನೀಡದೇ ಅಭಿವೃದ್ಧಿ ಬಯಸುವ ಬಿಜೆಪಿ ಅಭ್ಯರ್ಥಿ ರಾಘವೇಂದ್ರ ಅವರನ್ನು ಬೆಂಬಲಿಸಿ' ಎಂದು ಮನವಿ ಮಾಡಿದರು.

'ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ತಾತ್ಕಾಲಿಕವಾಗಿದ್ದು, ಯಾವುದೇ ಕಾರಣಕ್ಕೂ ಮುಂದುವರಿಯಲು ಸಾಧ್ಯವಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

'ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ, ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ದುರುಪಯೋಗಪಡಿಸಿಕೊಂಡು ಕೆಳ ಸಮುದಾಯದ ಜನಾಂಗಕ್ಕೆ ಅನ್ಯಾಯವೆಸಗಿದೆ. ಕಾಂಗ್ರೆಸ್ ನಾಯಕರು ಕೇವಲ ಭಾಷಣಕ್ಕೆ ಮಾತ್ರ ಸೀಮಿತವಾಗಿದ್ದು, ಕ್ಷೇತ್ರದ ಜನತೆ ಇಟ್ಟ ಅಭಿವೃದ್ಧಿಯ ನಿರೀಕ್ಷೆಯನ್ನು ಹುಸಿ ಮಾಡಿದ್ದಾರೆ. ಇಂಥವರಿಂದ ಕ್ಷೇತ್ರದ ಅಭಿವೃದ್ಧಿ ಸಾಧ್ಯವೇ' ಎಂದು ಪ್ರಶ್ನಿಸಿದರು.

'ದೇಶದಲ್ಲಿ ಭ್ರಷ್ಟಾಚಾರ ರಹಿತ ಆಡಳಿತ ನೀಡಿರುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಯೋಜನೆಗಳನ್ನು ಜನರಿಗೆ ಮನವರಿಕೆ ಮಾಡುವ ಮೂಲಕ ಅಭಿವೃದ್ಧಿಯ ಆಧಾರದ ಮೇಲೆ ಚುನಾವಣೆಯಲ್ಲಿ ಮತಯಾಚನೆ ಮಾಡುತ್ತೇವೆ' ಎಂದರು.

'ಬಿ.ವೈ.ರಾಘವೇಂದ್ರ ಹಲವು ಅಭಿವೃದ್ಧಿ ಪರ ಯೋಜನೆಗಳನ್ನು ಜಾರಿಗೆ ತಂದಿದ್ದು, ಜಿಲ್ಲೆಯನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಿದ್ದಾರೆ. ಅಭಿವೃದ್ಧಿಯ ಕನಸು ಹೊಂದಿರುವ ಅವರು, ವಿಮಾನ ನಿಲ್ದಾಣ, ರೈಲ್ವೆ, ಕೈಗಾರಿಕೆಗಳ ಸ್ಥಾಪನೆಗೆ ಒತ್ತು ನೀಡುವುದರಿಂದ ಇನ್ನಷ್ಟು ಅಭಿವೃದ್ಧಿ ಕಾರ್ಯ ಮಾಡಲು ಇನ್ನೊಮ್ಮೆ ಅವರನ್ನು ಹೆಚ್ಚಿನ ಮತಗಳ ಅಂತರದಲ್ಲಿ ಗೆಲ್ಲಿಸಿ' ಎಂದು ಮನವಿ ಮಾಡಿದರು.

'ಗ್ಯಾರಂಟಿ ಯೋಜನೆಗಳ ಭರವಸೆ ನೀಡಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರದ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಜನರಿಗೆ 10 ಕೆ.ಜಿ. ಅಕ್ಕಿ ನೀಡುತ್ತೇವೆ ಎಂದು ಸುಳ್ಳು ಹೇಳಿ ಮೋಸ ಮಾಡಿದೆ. ನಿಜವಾಗಿ ಜನರಿಗೆ ಅಕ್ಕಿ ನೀಡುತ್ತಿರುವುದು ಕೇಂದ್ರ ಸರ್ಕಾರ. ಸೊರಬ ಕ್ಷೇತ್ರ ಅಭಿವೃದ್ಧಿಯಾಗಲು ಹರತಾಳು ಹಾಲಪ್ಪ, ಕುಮಾರ್ ಬಂಗಾರಪ್ಪ, ಸಂಸದ ರಾಘವೇಂದ್ರ ಕೊಡುಗೆ ಅಪಾರವಾಗಿದೆ' ಎಂದರು.

ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಪ್ರಕಾಶ್ ತಲಕಾಲಕೊಪ್ಪ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಜು ಮಾವಿನಬಳ್ಳಿಕೊಪ್ಪ, ಮುಖಂಡರಾದ ಪಾಣಿ ರಾಜಪ್ಪ, ಜ್ಞಾನೇಶ್, ಅರವಿಂದ್, ಪ್ರವೀಣ್, ಪ್ರಶಾಂತ್, ಶಿವಕುಮಾರ್ ಕಡಸೂರು, ವಿ.ಜಿ.ಪರಶುರಾಮ್, ಎಂ.ಆರ್.ಪಾಟೀಲ್, ಎಂ.ನಾಗಪ್ಪ, ಅರುಣ್ ಕುಗ್ವೆ, ಉಮೇಶ್, ಜಾನಕಪ್ಪ, ಶಿವಯೋಗಿ, ವಿನಯ್ ಶೆರ್ವಿ, ಮಲ್ಲಿಕಾರ್ಜುನ ದ್ವಾರಳ್ಳಿ ಇದ್ದರು.






## ಕಾಶಿ ಪೀಠದ ಶ್ರೀಗಳ ಉತ್ಸವ

ಸುದ್ದಿಸಂಚಾರಿ | ಶಿರಾಳಕೊಪ್ಪ

ಶಿರಾಳಕೊಪ್ಪ ಸಮೀಪದ ಕಾನಳ್ಳಿ ಗ್ರಾಮದಲ್ಲಿ ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯ ಶ್ರೀಗಳ ಉತ್ಸವ ನೆರವೇರಿತು.

ಆಶೀರ್ವಚನ ನೀಡಿದ ಅವರು, 'ಸಿದ್ಧಾಂತ ಶಿಖಾಮಣಿ, ವೀರಶೈವರ ಪ್ರಾಚೀನ ಧರ್ಮ ಗ್ರಂಥ. ಇದು ಭಾರತದ ಬಹುತೇಕ ಭಾಷೆಗಳಲ್ಲಿ ಹಾಗೂ ರಷ್ಯನ್ ಸೇರಿದಂತೆ ಇತರೆ ಭಾಷೆಗಳಲ್ಲಿ ಮುದ್ರಣ ಗೊಂಡಿದ್ದು, ಜೀವನದ ಮೌಲ್ಯಗಳನ್ನು ತಿಳಿಸುವ ಪವಿತ್ರ ಗ್ರಂಥವಾಗಿದೆ. ಈ ಜಗತ್ತಿನಲ್ಲಿ ಮನುಷ್ಯ ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಸಂಸ್ಕಾರವಂತನಾಗಲು ಹಾಗೂ ಭವಿಷ್ಯದ ಬದುಕಿಗೆ ಮಾರ್ಗಸೂಚಿ ಆಗಬೇಕು' ಎಂದರು.

ಶಿರಾಳಕೊಪ್ಪ ವಿರಕ್ತ ಮಠದ ಸಿದ್ದೇಶ್ವರ ಸ್ವಾಮೀಜಿ, ಸಾಲೂರು ಹಿರೇಮಠದ ಗುರುಲಿಂಗ ಜಂಗಮ ಶಿವಾಚಾರ್ಯ ಸ್ವಾಮೀಜಿ, ತೊಗರ್ಸಿ ಮಳೆ ಹಿರೇಮಠದ ಮಹಾಂತ ದೇಶಿಕೇಂದ್ರ ಸ್ವಾಮೀಜಿ, ತೊಗರ್ಸಿ ಪಂಚವಣ್ಣಿಗೆ ಮಠದ ಚನ್ನವೀರ ದೇಶಿಕೇಂದ್ರ ಸ್ವಾಮೀಜಿ, ಕಡೇನಂದಿಹಳ್ಳಿ ಪುಣ್ಯಾಶ್ರಮದ ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ಪ್ರಭುಸ್ವಾಮಿ ಕಾನಳ್ಳಿ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಶಿಕಾರಿಪುರ ತಾಲೂಕು ಪುರೋಹಿತ ಬಳಗದವರಿಂದ ವೇದಘೋಷ ನೆರವೇರಿತು.






## ಶಿಕಾರಿಪುರ ಕುಮದ್ವತಿ ಕಾಲೇಜ್ ಪ್ರವೇಶ ಪ್ರಾರಂಭ

# ಆನವಟ್ಟಿಯಲ್ಲಿ ಪಕ್ಷೇತರ ಅಭ್ಯರ್ಥಿ ಕೆ.ಎಸ್ ಈಶ್ವರಪ್ಪ ಬಹಿರಂಗ ಸಮಾವೇಶ



ಸುದ್ದಿ ಸಂಚಾರಿ
ಆನವಟ್ಟಿ:ಅಪ್ಪಟ ಹಿಂದುವಾದಿ ಸುಮಾರು 40 ವರ್ಷದಿಂದ ಹಿಂದುಗಳ ಪರವಾಗಿ ಹೋರಾಟ ಮಾಡಿ, ಹಿಂದುಳಿದ ವರ್ಗದವರಿಗೆ ಶಕ್ತಿ ನೀಡಿ, ಸರ್ವಧರ್ಮದವರನ್ನು ಸಮಾನತೆಯಿಂದ ಕಂಡ ನಾಯಕ ಕೆ.ಎಸ್ ಈಶ್ವರಪ್ಪ ಅವರನ್ನು ಸ್ವಾರ್ಥ ರಾಜಕರಣಕ್ಕೆ ಬಲಿಪಶು ಮಾಡಿರುವ ಕುಟುಂಬ ರಾಜಕರಣಕ್ಕೆ ತಕ್ಕಪಾಠ ಕಲಿಸಲು ರಾಷ್ಟ್ರಭಕ್ತ ಬಗಳ ಸಿದ್ಧವಾಗಿದೆ ಎಂದು ಆನವಟ್ಟಿ ಘಟಕದ ಅಧ್ಯಕ್ಷ ರಾಮಾನಾಯ್ಕ ಕೋಟಿಪುರ ಅವರು ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿದರು.

ಮಾಜಿ ಉಪಮುಖ್ಯಮಂತ್ರಿ ಹಾಗೂ ಶಿವಮೊಗ್ಗ ಲೋಕಸಭೆ ಕ್ಷೇತ್ರದ ಅಭ್ಯರ್ಥಿ ಕೆ.ಎಸ್ ಈಶ್ವರ ಅವರು ಹಿಂದುತ್ವದ ಪ್ರಭಲ ಧೋರಣೆಯನ್ನು ಹೊಂದಿರುವ ಕಾರಣ ಅವರನ್ನು ಮಹಿಳಾ ಸ್ವಸಹಾಯ ಸಂಘಗಳು, ಕಾರ್ಮೀಕರು, ವಿಚಾರವಂತರು, ಯುವಕರು ಅವರ ಸ್ಪರ್ಧೆಯನ್ನು ಬೆಂಬಲಿಸಿದ್ದಾರೆ ಎಂದರು. ಹಳ್ಳಿ-ಹಳ್ಳಿಗಳಲ್ಲಿ ಉತ್ತಮ ಪ್ರತಿಕ್ರಿಯೆ ಹಾಗೂ ಸ್ಪಂದನೆ ದೊರೆಯುತ್ತಿದ್ದು, ಈಶ್ವರಪ್ಪ ಅವರಿಗೆ ಬಲ ನೀಡುವ ಸಲುವಾಗಿ, ಏಪ್ರೀಲ್ 28 ರಂದು ಆನವಟ್ಟಿಯ ಚೌಟಿ ಪೋಯಲ್ಸ್ (ಇಂಡಿಯನ್ ಪೆಟ್ರೋಲ್ ಬಂಕ್) ಹಿಂಬದಿಯಲ್ಲಿ ಬೃಹತ್ ಬರಹಿಂಗ ಪ್ರಚಾರ ಸಮಾವೇಶವನ್ನು ರಾಷ್ಟ್ರಭಕ್ತ ಬಗಳದಿಂದ ಹಮ್ಮಿಕೊಂಡಿದ್ದು, ಅಂದಾಜು 15 ರಿಂದ 20 ಸಾವಿರ ಜನಸಂಖ್ಯೆ ಸೇರುವ ನಿರೀಕ್ಷೆಯಿಂದೆ ಎಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ರಾಷ್ಟ್ರಭಕ್ತ ಬಳಗದ ಕೇಶವನಾಯ್ಕ, ಸಂಜೀವ್‌ನಾಯ್ಕ, ವಕೀಲ ಶಿವಪ್ಪ ಇದ್ದರು.

## ಮೇ 2 ರಾಹುಲ್ ಗಾಂಧಿ ಶಿವಮೊಗ್ಗಕ್ಕೆ ಭೇಟಿ

ಸುದ್ದಿ ಸಂಚಾರಿ | ಶಿವಮೊಗ್ಗ

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಪಕ್ಷದ ಅಭ್ಯರ್ಥಿ ಗೀತಾ ಶಿವರಾಜ್‌ಕುಮಾರ್ ಪರ ಪ್ರಚಾರ ಕೈಗೊಳ್ಳಲು ಮೇ 2ರಂದು ಶಿವಮೊಗ್ಗಕ್ಕೆ ಆಗಮಿಸುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ನಗರದ ಅಲ್ಲಮಪ್ರಭು ಮೈದಾನ ದಲ್ಲಿ ಅಂದು ಮಧ್ಯಾಹ್ನ 12ರಿಂದ 1.30ರವರಗೆ ನಡೆಯುವ ಸಮಾವೇಶದಲ್ಲಿ ರಾಹುಲ್ ಗಾಂಧಿ ಭಾಗವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ಬರಲಿದ್ದು, ಬೃಹತ್ ಸಮಾವೇಶ ನಡೆಯಲಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಏ.29ರಿಂದ ನಟ–ನಟಿಯರು ಪ್ರಚಾರದಲ್ಲಿ ಪಾಲ್ಗೊಳ್ಳಲು ಬರುತ್ತಿದ್ದಾರೆ. ನಟ ದುನಿಯಾ ವಿಜಯ್, ಡಾಲಿ ಧನಂಜಯ್, ಧ್ರುವ ಸರ್ಜಾ, ವಿಜಯ ರಾಘವೇಂದ್ರ, ‘ನೆನಪಿರಲಿ’ ಪ್ರೇಮ್, ಚಿಕ್ಕಣ್ಣ, ಚಂದನ್ ಶೆಟ್ಟಿ, ಅತುಲ್, ನಿಶ್ಚಿಕಾ ನಾಯ್ಡು ಪ್ರಚಾರ ಮಾಡಲಿದ್ದಾರೆ. ಭದ್ರಾವತಿ, ಬೈಂದೂರು ಸೇರಿದಂತೆ ಹಲವೆಡೆ ರೋಡ್ ಶೋ ನಡೆಸಲಿದ್ದಾರೆ ಎಂದು ಹೇಳಿದರು.

## ಕಾಡಾಂಚಿನ ಕೆರೆಗಳಿಗೆ ನೀರು ತುಂಬಿಸಿ:ಶಿವಪ್ಪ ಹುಣಸವಳ್ಳಿ



ಸುದ್ದಿ ಸಂಚಾರಿ
ಆನವಟ್ಟಿ:
ಸೊರಬ ತಾಲ್ಲೂಕು ಅತೀ ಹೆಚ್ಚು ಕೆರೆಗಳನ್ನು ಹೊಂದಿದೆ. ಮಳೆಗಾಲ ಮುಗಿಯುತ್ತಲ್ಲೇ ಬತ್ತಿಹೋಗುತ್ತವೆ. ಈ ವರ್ಷ ಮಳೆ ಕೊರತೆಯಿಂದ ಬಹುತೇಕ ಕೆರೆಗಳು ಬತ್ತಿಹೋಗಿವೆ. ಕಾಡು ಪ್ರಾಣಿ-ಪಕ್ಷಿಗಳಿಗೆ ಕುಡಿಯಲು ನೀರು ಇಲ್ಲ ಎಂದು ಹಸಿರು ಸೇನೆಯ ಗೌರವ ಅಧ್ಯಕ್ಷ ಶಿವಣ್ಣ ಹುಣಸವಳ್ಳಿ ಬೇಸರ ವ್ಯಕ್ತಪಡಿಸಿದರು.

ಶುಕ್ರವಾರ ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಕಾಡಿನ ಪ್ರಾಣಿ-ಪಕ್ಷಿಗಳಿಗೆ ಕುಡಿಯಲು ನೀರು ಸಿಗದೆ ಮೃತಪಡುತ್ತಿವೆ. ಆಹಾರ ಮತ್ತು ನೀರಿಗಾಗಿ ಗ್ರಾಮದೊಳಗೆ ನುಗ್ಗಿ ಮನುಷ್ಯರಿಗೂ ಪ್ರಾಣ ಹಾನಿ ಮಾಡುತ್ತಿವೆ. ರೈತರ ಹೊಲ-ಗದ್ದೆಗಳಿಗೆ ದಾಳಿ ಇಟ್ಟು ಫಸಲಿಗೆ ಬಂದ ಬೆಳೆಯನ್ನು ನಾಶ ಮಾಡುತ್ತಿವೆ. ಕಾಂಡಾಂಚಿನ ಕೆರೆಗಳಲ್ಲಿ ನೀರು ಇಲ್ಲದೆ, ಕಾಡಿನ ಪ್ರಾಣಿಗಳು ಗ್ರಾಮಗಳಿಗೆ ನುಗ್ಗುತ್ತಿವೆ. ಪ್ರಾಣಿ-ಪಕ್ಷಿಗಳ ರಕ್ಷಣೆಗಾಗಿ ಅರಣ್ಯ ಇಲಾಖೆ ಅವರು ಕಾಂಡಾಂಚಿನಲ್ಲಿ ಕೊಳವೆ ಬಾವಿಗಳನ್ನು ಕೊರೆಸಿ, ಕೆರೆಗಳನ್ನು ತುಂಬಿಸಬೇಕು ಎಂದು ಅರಣ್ಯ ಇಲಾಖೆ ಹಾಗೂ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

## Top News ಪ್ರಶಸ್ತಿಗೆ ಅರ್ಜಿ ಆಹ್ವಾನ

ಶಿವಮೊಗ್ಗ: ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ವತಿಯಿಂದ ರಾಜ್ಯಮಟ್ಟದ ಕಾಯಕರತ್ನ (ರಾಜಕೀಯ ಕ್ಷೇತ್ರ) ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಹಲವು ವರ್ಷಗಳಿಂದ ರಾಜ್ಯದಾದ್ಯಂತ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರಿಗೆ ವೈಜ್ಞಾನಿಕ ಸಂಶೋಧನಾ ಪರಿಷತ್‌ನ ಹುಲಿಕಲ್ ನಟರಾಜ್ ನೇತೃತ್ವದಲ್ಲಿ ರಾಜ್ಯಮಟ್ಟದ ಎಚ್.ಎನ್. ಪ್ರಶಸ್ತಿ ನೀಡುತ್ತಾ ಬರಲಾಗಿದೆ. ಈ ಬಾರಿ ಕೂಡ ಶಿವಮೊಗ್ಗ ಜಿಲ್ಲೆಯಲ್ಲಿ ರಾಜಕೀಯವಾಗಿ ಗುರುತಿಸಿಕೊಂಡಿರುವ ತಳಮಟ್ಟದ ಶ್ರಮಜೀವಿಗಳು ಅಥವಾ ಅವರ ಪರವಾಗಿ ಬೇರೆಯವರು ಏ. 30ರೊಳಗೆ ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಮೇ 18 ರಂದು ಬೀದರ್‌ನಲ್ಲಿ ನಡೆಯುವ ರಾಜ್ಯಮಟ್ಟದ ಕಾಯಕ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಗೌರವಿಸಲಾಗುವುದು ಎಂದು ಪರಿಷತ್‌ನ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಡಿ. ರವಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ 94824 49464ಗೆ ಸಂಪರ್ಕಿಸಬಹುದು.






ಸುದ್ದಿ ಸಂಚಾರಿ ಇದು ನಮ್ಮೂರ ಸುದ್ದಿ ವಾಹಿನಿ

# ಮಂಗನ ದಾಳಿಗೆ ಬೆಚ್ಚಿಬಿದ್ದಿರುವ ಟ್ರ್ಯಾಕ್ಟರ್ ಚಾಲಕರು




**ವಕೀಲ ಶಿವರಾಜ್ ಒತ್ತಾಯ**

**ಗ್ರಾಮದಲ್ಲಿ ಮಂಗನ ಉಪಟಳ ವ್ಯಾಪಕವಾಗಿದ್ದು, ಜನರು ಹೈರಾಣಾಗಿದ್ದಾರೆ.ಹಾಗಾಗಿ, ಅರಣ್ಯ ಇಲಾಖೆ ಈ ಮಂಗವನ್ನು ಸೆರೆಹಿಡಿದು ಅರಣ್ಯಕ್ಕೆ ಬಿಡಬೇಕೆಂದು ಒತ್ತಾಯಿಸಿದ್ದಾರೆ**

ಸುದ್ದಿ ಸಂಚಾರಿ
ಶಿರಾಳಕೊಪ್ಪ
ಹತ್ತಿರದ ಸುಣ್ಣದಕೊಪ್ಪ ಗ್ರಾಮದಲ್ಲಿ ಮಂಗನ ದಾಳಿಯಿಂದಾಗಿ ಇಬ್ಬರಿಗೆ ಗಾಯವಾಗಿರುವ ಘಟನೆ ನಡೆದಿದೆ.

ಕರಿ ಮುಸ್ಯಾ ಬಣ್ಣದ ಮಂಗ ಒಂದು ಟ್ರಾಕ್ಟರ್ ಚಾಲಕರ ಮೇಲೆ ದಾಳಿ ಮಾಡುತ್ತಿದ್ದು ಗ್ರಾಮದ ಟ್ರ್ಯಾಕ್ಟರ್ ಚಾಲಕರು ಕಂಗಲಾಗಿದ್ದಾರೆ.ಈಗಾಗಲೇ ಹಲವು ಚಾಲಕರ ಮೇಲೆ ದಾಳಿ ಮಾಡಿರುವ ಮಂಗ ಇಬ್ಬರನ್ನು ತೀವ್ರವಾಗಿ ಗಾಯಗೊಳಿಸಿದ್ದು, ಒಬ್ಬರಿಗೆ ಏಳು ಹೊಲಿಗೆಯನ್ನು ಹಾಕಲಾಗಿದೆ.

ಇನ್ನೂ ಕೆಲವು ಚಾಲಕರ ಮೇಲೆ ದಾಳಿ ಮಾಡುವ ಪ್ರಯತ್ನ ಮಾಡಿದ್ದು, ಅವರನ್ನು ಪರಚಿ ಗಾಯಗೊಳಿಸಿದೆ. ಶರ್ಟ್ ಪಂಜೆಗಳನ್ನು ಹರಿದು ಹಾಕಿದೆ. ಹಾಗಾಗಿ ಗ್ರಾಮದಲ್ಲಿ ಟ್ರ್ಯಾಕ್ಟರ್ ಚಾಲಕರು ವಾಹನ ಮುಟ್ಟಲು ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ.ಟ್ರ್ಯಾಕ್ಟರ್ ಶಬ್ದ ಕೇಳುತ್ತಿದ್ದಂತೆಯೇ ಈ ಮಂಗ ಬಂದು ದಾಳಿ ನಡೆಸುತ್ತಿದೆ.ಇದರ ದಾಳಿಯಿಂದಾಗಿ ಬಿಹೆಚ್ ಪ್ರಶಾಂತ್,ಅಣ್ಣಪ್ಪ, ಕಿರಣ್ ,ಶಶಿ, ಗಣೇಶ್, ಹರೀಶ್ ಗಾಯಗೊಂಡಿದ್ದಾರೆ.

ಈಗಾಗಲೇ ಗ್ರಾಮಸ್ಥರು ಅರಣ್ಯ ಇಲಾಖೆಗೆ ಮನವಿಯನ್ನು ಸಹ ಸಲ್ಲಿಸಿದ್ದಾರೆ.

Sri Basaveshwara Abhivruddi Association (R.)
Vybhav Pre-university College
& Residential School
S.S Road Shiralakoppa-577428




ADMISSION OPEN NOW
COURSES OFFERED
2024-25